Strivad Mattu Mahila Adyayanad Nelegalu.

# ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ನೆಲೆಗಳು

– ಪುಂಡಲೀಕ ಮಾದರ

"ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯಲ್ಲ, ಆಳುವ ಅಧಿಕಾರವಲ್ಲ: ಆಕೆಗೆ ಅವಶ್ಯವಿರುವುದು ಸಹಜವಾಗಿ ಬೆಳೆಯುವ ಅವಕಾಶ; ಸ್ವಂತದ ಬುದ್ಧಿಯನ್ನು ಉಪಯೋಗಿಸುವ ಅವಕಾಶ; ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ" ಹೀಗೆಂದು ಮಹಿಳಾ ಸ್ವಾತಂತ್ರ್ಯವನ್ನು ಅಮೇರಿಕಾದ ಪ್ರಖ್ಯಾತ ಮಹಿಳಾ ವಿಮೋಚನಾವಾದಿ, ಮಾರ್ಗರೇಟ್ ಪುಲರ್ ವ್ಯಾಖ್ಯಾನಿಸಿದಳು. ಈ ವ್ಯಾಖ್ಯಾನ ಇಂದು ಒಂದು ಪ್ರಮುಖ ಚಳುವಳಿಯಾಗಿ ಜಗತ್ತಿನಾದ್ಯಂತ ಎಲ್ಲರ ಗಮನ ಸೆಳೆಯುತ್ತಿದೆ, ಮಹಿಳಾ ಪ್ರಜ್ಞೆ (Women's Consciousness) ಸಮಗ್ರತೆಗಾಗಿ ಹುಡುಕಾಟ (The Search for wholeness) ತನ್ನತನದ ಸಾಕ್ಷಾತ್ಕಾರ (Discorery OF the Serf), ಆಧುನಿಕ ಮಹಿಳೆ (The New Women) ದುಃಖಾಭಿವ್ಯಕ್ತಿ Speaking Bitterness) ಸ್ತ್ರೀತ್ವ (Ferminism) ಮೊದಲಾದ ಪರಿಕಲ್ಪನೆಗಳ ಮೂಲಕ ಚರ್ಚೆ ವಾಗ್ವಾದಗಳು ನಡೆದು ಸಂಸ್ಕೃತಿ, ಇತಿಹಾಸ, ರಾಜಕಾರಣ ಇವುಗಳ ಹಿನ್ನೆಲೆಯಲ್ಲಿ ಮಹಿಳೆಯನ್ನು ವ್ಯಾಖ್ಯಾನಿಸುವ ಅರ್ಥಪೂರ್ಣ ಪ್ರಯತ್ನ ನಡೆಯುತ್ತದೆ.

೧೮ನೇ ಶತಮಾನದ ವೇಳೆಗೇ ಇಂದು ನಾವು ಸ್ತ್ರೀವಾದಿ ವಿಮರ್ಶೆಯೆಂದು ಕರೆಯಬಹುದಾದ ವಿಮರ್ಶಾ ಪದ್ಧತಿಯನ್ನು "Vindication OF the Rights OF woman" ಎಂಬ ಪುಸ್ತಕವನ್ನು ಬರೆದ ಮೇರಿ ಮೊಲ್‌ಸ್ಟೋನ್ ಕ್ರಾಪ್ಟ್ ಬಳಸುತ್ತಿದ್ದಳು. ಮಹಿಳಾ ಓದುಗರು ತಮ್ಮನ್ನು ತಾವು ಕ್ಷುಲ್ಲಕ, ಅಸಹಾಯಕ ಎಂದು ನಂಬುವಂಥ ಸ್ತ್ರೀ ಚಿತ್ರಣಗಳನ್ನು ನೀಡುವ ಜನಪ್ರಿಯ 'ಭಾವುಕ' ಕಾದಂಬರಿಗಳನ್ನು ಆಕೆ ಕಟುವಾಗಿ ವಿಮರ್ಶಿಸಿದಳು ಈ ಶತಮಾನದಲ್ಲಿ ಈ ಚರ್ಚೆ ವರ್ಜೀನಿಯಾ ವೊಲ್ಪ್ ಮತ್ತು ಸಿಮೋನ್‌ದ ಬುವಾ ಅವರಲ್ಲಿ ಪ್ರಖರವಾಗಿ ಕಾಣಿಸಿಕೊಂಡಿತು.

"ಕಾಲ್ಪನಿಕವಾಗಿ ಮಹಿಳೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಆದರೆ ವಾಸ್ತವಿಕವಾಗಿ ಅವಳು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದ್ದಾಳೆ. ಕಾವ್ಯದಲ್ಲಿ ಮೊದಲಿನಿಂದ ಕಡೆಯವರೆಗೂ ಅವಳೇ ವ್ಯಾಪಿಸಿರುತ್ತಾಳೆ; ಆದರೆ ಚರಿತ್ರೆಯಿಂದ ಮಾತ್ರ ಗೈರುಹಾಜರಾಗಿರುತ್ತಾಳೆ, ಕಾಲ್ಪನಿಕ ಬರಹಗಳಲ್ಲಿ ಆಕೆ ರಾಜಮಹಾರಾಜರನ್ನೂ ವಿಜಯಿಗಳನ್ನೂ ಆಳುತ್ತಿರುತ್ತಾಳೆ; ನಿಜ ಜೀವನದಲ್ಲಿ ತನ್ನ ತಂದೆತಾಯಿಗಳ ಬಲವಂತಕ್ಕೆ

ಅರ್ಥಮಾಡಿಕೊಳ್ಳಲು ನಡೆಯುತ್ತಿರುವ ಪ್ರಯತ್ನಗಳನ್ನು ಈ ಸಂಗ್ರಹದ ಲೇಖನಗಳು ನಮಗೆ ಒದಗಿಸಿಕೊಡುತ್ತವೆ. ಸ್ತ್ರೀವಾದಿ ಚಳುವಳಿ ಇಂದು ವಿವಿಧ ಶಾಸ್ತ್ರಗಳಿಗೆ ಸವಾಲು ಒಡ್ಡುತ್ತಿದೆ. ಇತಿಹಾಸ ಹೇಗೆ 'ಅವನ' ಇತಿಹಾಸ 'his-story' ಆಗಿದೆ ಎಂಬುದನ್ನು ಅದು ವಿವರಿಸಲು ಪ್ರಯತ್ನಿಸುತ್ತಿದೆ. ಮಾನವಶಾಸ್ತ್ರ, ಅರ್ಥಶಾಸ್ತ್ರ, ವಿಜ್ಞಾನ, ಸಾಹಿತ್ಯ– ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಸ್ತ್ರೀ ಕುರಿತ ಹೊಸ ಬಗೆಯ ಚಿಂತನೆ ನಡೆಯುತ್ತಿರುವುದನ್ನು ಈ ಸಂಗ್ರಹ ದಾಖಲಿಸುತ್ತದೆ. ಪಾರ್ಥಾ ಚಟರ್ಜಿ, ಸೂಸಿಥಾರು ಮತ್ತು ಕೆ. ಲಲಿತ, ವೀರ್ ಭಾರತ್ ತಲ್‌ವಾರ್, ಶಾಂತಾಗೋಖಲೆ, ವಿದ್ಯುತ್‌ಭಾಗವತ್, ಮುಕಾಮನೋಹರ, ಬಿ.ಎನ್. ಸುಮಿತ್ರಾಬಾಯಿ, ಸೀಮಂತಿನಿ ನಿರಂಜನ, ವಿಜಯಾದಬ್ಬೆ, ಬಿ.ಎಸ್. ವೆಂಕಟಲಕ್ಷ್ಮೀ–ಮೊದಲಾದವರು ಸ್ತ್ರೀ ಸಮಸ್ಯೆಯ ಭಿನ್ನ ಆಯಾಮಗಳನ್ನು ಕುರಿತು ಚರ್ಚಿಸಿರುವ ಲೇಖನಗಳು ಇಲ್ಲಿವೆ. ಸಂಪಾದಕರಾದ ತೇಜಸ್ವಿನಿ ನಿರಂಜನ ಅವರು ಸೊಗಸಾದ, ಉಪಯುಕ್ತವಾದ, ಮಾಹಿತಿಪೂರ್ಣರಾದ ಪ್ರಸ್ತಾವನೆಯನ್ನು ಬರೆದು 'ಮಹಿಳಾ ಅಧ್ಯಯನ'ಕ್ಕೆ ಸೂಕ್ತ ನೆಲೆಗಳನ್ನು ಒದಗಿಸಿದ್ದಾರೆ.

**ಗ್ರಂಥಋಣ :**

೧. ಸ್ತ್ರೀವಾದ ಸಾಹಿತ್ಯ ವಿಮರ್ಶೆ ಸಂಪಾದಕರು : ತೇಜಸ್ವಿನಿ ನಿರಂಜನ ಸೀಮಂತಿನಿ ನಿರಂಜನ

೨. ಮಧ್ಯಯುಗದ ಮಹಿಳಾ ಸಾಹಿತ್ಯ ಮತ್ತು ಸೃಜನಶೀಲತೆ : ಡಾ. ಶಾಂತಾ ಇಮ್ರಾಪೂರ

೩. ಕನ್ನಡ ಸ್ತ್ರೀವಾದಿ ವಿಮರ್ಶೆಯ ತಾತ್ವಿಕ ನೆಲೆಗಳು : ಡಾ. ಈರಣ್ಣ ಇಂಜಗನೇರಿ.

ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಸ್. ಎ. ಪದವಿ ಕಾಲೇಜು, ನರೇಗಲ್ಲ.

# ಪುನರ್ನವ

ಭಾಗ-೧

ಸಂಪಾದಕರು

ಡಾ. ಶಿವಾನಂದ ಬ. ಟವಳಿ

ಡಾ. ಈರಣ್ಣ ಇಂಜಗನೇರಿ



# ಪುನರ್ನವ ಭಾಗ-೧


| | | |
|---|---|---|
| ಸಂಪಾದಕರು | : | ಡಾ. ಶಿವಾನಂದ ಬ. ಟವಳಿ<br>ಡಾ. ಈರಣ್ಣ ಇಂಜಗನೇರಿ |
| ಪ್ರಕಾಶಕರು | : | ಬಸು ಪ್ರಕಾಶನ, ಧಾರವಾಡ,<br>ಮೊ. ೯೭೩೮೬೬೪೮೭೭ |
| ಮೊದಲಮುದ್ರಣ | : | ೨೦೨೦ |
| ಪುಟಗಳು | : | xviii + ೩೨೦ |
| ಪ್ರತಿಗಳು | : | ೧೦೦೦ |
| ಹಕ್ಕುಗಳು | : | ಪ್ರಕಾಶಕರದು |
| ಬಳಸಿದ ಕಾಗದ | : | ೮೦ ಜಿ.ಎಸ್.ಎಮ್. |
| ಬೆಲೆ | : | ರೂ. ೩೦೦/- |
| ಮುಖಪುಟ ವಿನ್ಯಾಸ | : | ಶ್ರೀ ರವಿ ಗೋವನಕೊಪ್ಪ |
| ಮುದ್ರಕರು | : | ಬಿ. ಜಿ. ಪ್ರಿಂಟರ್ಸ್, ಧಾರವಾಡ. ೯೮೪೫೨ ೭೦೧೧೪ |


---

# PUNARNAVA- Part-1


| | | |
|---|---|---|
| Editors | : | **Dr. Shivanand B. Tavali**<br>Lecturer, Dept. of Kannada,<br>J.S.S. College, Dharwad. Cell No.- 9844035788,<br>**Dr. Iranna Injaganeri**<br>Lecturer, Dept. of Kannada,<br>HIPU College, Dharwad. Cell No.- 9901669309 |
| Published by | : | **Basu Prakashana, Dharwad**<br>Cell No.- 9738664877<br>Email-basuprakashana@gmail.com |
| Rights | : | Publications |
| First Impression | : | 2020 |
| Copies | : | 1000 |
| Pages | : | xviii + 320 |
| Price | : | 300/- |
| Size | : | 1/8 Demi |
| Paper | : | 80 GSM Maplitho |
| Printed at | : | B.G. Printers, Dharwad. 98452 70114 |
| **ISBN No** | : | **978-81-939340-7-4** |

೧೫. ಪಂಪನ ಆದಿಪುರಾಣದಲ್ಲಿ ಕನಸು ..89
– ಯಲ್ಲಪ್ಪಜ್ಜರ ಫಕೀರಪ್ಪ

೧೬. ಮೊಗವೀರ ಸಮುದಾಯದ ಪಕ್ಷಿನೋಟ ..95
– ಗಣೇಶ ಹೆಗಡೆ

೧೭. ತತ್ವಪದಗಳಲ್ಲಿ ಬೆಡಗು ಒಂದು ತಾತ್ವಿಕ ವಿವೇಚನೆ ..103
– ಗುರುರಾಜ್ ಹೆಚ್.

೧೮. ಉನ್ನತ ಶಿಕ್ಷಣದಲ್ಲಿ ಭಾಷಾ ಕಲಿಕೆ ಮತ್ತು ಬಳಕೆಯ ಮಹತ್ವ ..111
– ಲೋಹಿತ್ ಪಿ.

೧೯. ಕರಾವಳಿಯ ನಾಥಪಂಥ ಸಂಬಂಧಿ ಕುಣಿತದ ಸ್ಥಿತಿಗತಿ ..120
– ಲೋಕೇಶ ಕುಂಚಡ್ಕ

೨೦. ತತ್ವಪದ ಸಾಹಿತ್ಯ ಪರಂಪರೆಗೆ ಶಿಶುನಾಳ ಶರೀಫರ ಕೊಡುಗೆ ..127
– ಮಹೇಶ ಅಂಗಡಿ

೨೧. 'ಸರಸಮ್ಮನ ಸಮಾಧಿ'ಯಲ್ಲಿ ದಾಂಪತ್ಯ : ಮನೋವಿಜ್ಞಾನದ ಕನ್ನಡಿಯಲ್ಲಿ ..132
– ಮೈತ್ರಿ ಭಟ್

೨೨. ಕನ್ನಡ ಸಾಹಿತ್ಯದಲ್ಲಿ ರಾಮ ಮನೋಹರ ಲೋಹಿಯಾ ಪ್ರಭಾವ ..140
– ಮಾಳಪ್ಪ

೨೩. 'ಜಾತಿ' ಎಂಬ ಜಾಗತಿಕ ಪ್ರಶ್ನೆಗೆ ಕನ್ನಡ ಕವಿಗಳ ಚಿಂತನೆ ..146
– ಮಲ್ಲಿಕಾರ್ಜುನ ಗ. ಮೋಡಗಿ

೨೪. ಖಂಡಕಾವ್ಯದ ಸ್ವರೂಪ ಹಾಗೂ ಲಕ್ಷಣ ..153
– ನಮಿತಾ ಎ.

೨೫. ೧೮೩೧ರ ನಗರ ರೈತ ಬಂಡಾಯ : ಒಂದು ಚರ್ಚೆ ..158
– ನರಸಿಂಹಮೂರ್ತಿ ಟಿ. ಎಸ್.

೨೬. ಬಸವಣ್ಣನ ವಚನಗಳಲ್ಲಿ ಸಾಮಾಜಿಕ ವಿಮರ್ಶೆ ..163
– ನಿಶ್ಚಯ್ ವೈ. ಎಸ್.

೨೭. ಎಚ್. ಜಿ. ಸಣ್ಣಗುಡ್ಡಯ್ಯನವರ ಪ್ರಬಂಧ ಸಾಹಿತ್ಯ–
ಒಂದು ವಿಶ್ಲೇಷಣೆ ..168
– ಪದ್ಮಜ ವೈ. ಎಂ.

೨೮. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ನೆಲೆಗಳು ..176
– ಪುಂಡಲೀಕ ಮಾದರ

**ಬಸು ಪ್ರಕಾಶನ,**
**ಧಾರವಾಡ**



978-81-939340-7-4

**ಬೆಲೆ : 300/-**

ಸಾಹಿತ್ಯ, ಕಲೆ, ಸಂಸ್ಕೃತಿ, ರಂಗಭೂಮಿ, ಜನಪದ, ಶಿಕ್ಷಣ ಹೀಗೆ ಹಲವಾರು ಕ್ಷೇತ್ರಗಳ ಜೊತೆಗೆ ಪರಿಸರ ರಕ್ಷಣೆ ಹಾಗೂ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುವುದು ಪ್ರತಿಷ್ಠಾನದ ಮುಖ್ಯ ಉದ್ದೇಶ. ಈ ಉದ್ದೇಶದೊಂದಿಗೆ ೨೦೧೬ ರಿಂದ ಕಾರ್ಯ ಪ್ರವೃತ್ತವಾದರೂ ೨೦೧೮ ಡಿಸೆಂಬರ್ ೪ ರಂದು ಭೂಮಿ ಪ್ರತಿಷ್ಠಾನವು ನೋಂದಣಿಯಾಗಿದೆ.

'ಭೂಮಿಯು ಎಲ್ಲರಿಗಾಗಿ ಎಲ್ಲರೂ ಭೂಮಿಗಾಗಿ' ಇದು ಪ್ರತಿಷ್ಠಾನದ ಧ್ಯೇಯ ವಾಕ್ಯ. 'ಅಕ್ಷರ ಕ್ರಾಂತಿಯ ಜೊತೆಗೆ ವೃಕ್ಷ ಕ್ರಾಂತಿ. ನುಡಿ ಸೇವೆಯ ಜೊತೆಗೆ ನಾಡಿನ ಸೇವೆ' ಎಂಬ ದೂರದೃಷ್ಟಿಯೊಂದಿಗೆ ನಿಸ್ವಾರ್ಥ ಹಾಗೂ ಪ್ರಾಮಾಣಿಕ ಸೇವೆಯ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಯೇ ನಮ್ಮ ಸಾಮರ್ಥ್ಯ. ಭೂಮಿಯ ರಕ್ಷಣೆ ಪರಮ ಗುರಿ. ಭೂಮಿ ಮೇಲೆ ವಾಸಿಸುವ ಸರ್ವರಿಗೂ ಸಮನಾದ ಅವಕಾಶ ನೀಡುವುದು. ಹಲವಾರು ರಂಗಗಳಲ್ಲಿ ಪ್ರತಿಭಾವಂತ ಸೃಜನಶೀಲ ಮನಸ್ಸುಗಳಿಗೆ ವೇದಿಕೆಯನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶಗಳನ್ನು ಹೊಂದಿ ಈಗಾಗಲೇ ಮೂರು ವರ್ಷಗಳಿಂದ ಹಲವಾರು ಸದಭಿರುಚಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸಮಾಗಮ, ಅರಿವಿನ ಪಯಣ, ಹಸಿರು ಭೂಸಿರಿ, ಧರಣಿಮಂಡಲ ಹೀಗೆ ಹಲವು ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತ ಕಾರಣ ಈಗ 'ಪುನರ್ನವ' ಎಂಬ ಸಂಶೋಧನಾ ನಿಯತಕಾಲಿಕೆ ಹೊರತರಲು ಸರ್ವ ರೀತಿಯ ಪ್ರಯತ್ನಗಳು ಯೋಜಿತ ರೀತಿಯಲ್ಲಿ ನಡೆಯುತ್ತಿದೆ. ಇಂತಹ ಪ್ರಯತ್ನಗಳಿಗೆ ಮುನ್ನುಡಿಯೇ 'ಪುನರ್ನವ' ರಾಷ್ಟ್ರೀಯ ವಿಚಾರ ಸಂಕಿರಣ. ಒಟ್ಟಾರೆ ಸೃಜನಶೀಲ ಮನಸ್ಸುಗಳನ್ನು ಒಗ್ಗೂಡಿಸುವ ಕನಸು ನಮ್ಮದು.

ಸೃಜನಶೀಲರು, ಸಾಹಿತ್ಯಾಸಕ್ತರು, ಸಂಸ್ಕೃತಿ ಆರಾಧಕರು, ಪರಿಸರ ಪ್ರಿಯರು ಹಾಗೂ ಸಹೃದಯ ಆಸಕ್ತರಿಗೆ ಭೂಮಿ ಪ್ರತಿಷ್ಠಾನದ ಸದಸ್ಯರಾಗಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ತಾವು ನಮ್ಮ ಜೊತೆಗೆ ಈ ಸೇವೆಯಲ್ಲಿ ಕೈಜೋಡಿಸುವಿರೆಂದು ಭಾವಿಸಿದ್ದೇವೆ. ಬನ್ನಿ ನಾವೆಲ್ಲರೂ ಭೂಮಿಯ ಸೇವೆಗೆ ಒಂದಾಗೋಣ.

- ಭೂಮಿ ಪ್ರತಿಷ್ಠಾನ, ಧಾರವಾಡ